ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಾಜೆಕ್ಟ್ ಆಫೀಸರ್ ಆಲ್ಲಿಗೆ ಪೋಸ್ಟ್ ಮಾಡಬೇಕೆಂದು ಹೇಳಿದ್ದಾರೆ, ಆದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನೂ ಒಂದೆರಡು ಸಲಹೆಗಳನ್ನು ಏನು ಕೊಟ್ಟಿದ್ದಾರ ಅವುಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಕಂಬಗಳನ್ನು ಸ್ಥಳಾಂತರಿಸುವ ಬಗ್ಗೆ

೧೪೭ (೩೮೬) ಶ್ರೀ ಬಿ. ಗುರಪ್ಪಸಾದ್ (ನೆಲಮಂಗಲ).—ಮಾನ್ಯ ಭಾರಿ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಳೆದ ಅಧಿವೇಶನದಲ್ಲಿ ದಿನಾಂಕ ೯–೩–೮೮ ರಂದು ಚುಕ್ಕಿರಹಿತ ಪ್ರಶ್ನೆ ಸಂಖ್ಯೆ ೧೫೭೧ಕ್ಕೆ ರಾಮನಗರ ತಾಲ್ಲೂಕಿನ ದೊಡ್ಡ ಮಾಕಳಿಂಗ ಗ್ರಾಮದಲ್ಲಿ ಮನೆಯ ಮೇಲೆ ಹಾದು ಹೋಗುವ ೪೦೦ ವೋಲ್ಟೆಜ್ ವಿದ್ಯುಚ್ಛಕ್ತಿ ಲೈನನ್ನು ಸ್ಥಳಾಂತರಿಸಲು ಸದನದಲ್ಲಿ ಭರವಸೆ ನೀಡಿರುವುದು ನಿಜವಲ್ಲವೆ ?

ಆ) ದಿನಾಂಕ ೨೩–೭–೮೮ ರಂದು ಸದರಿ ವಿದ್ಯುಚ್ಛಕ್ತಿ ಕಂಬವನ್ನು ಸ್ಥಳಾಂತರಿಸಲು ರೂ. ೧,೮೦೦–೦೦ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಹಣ ಸಂದಾಯ ಮಾಡಿ ಮನವಿ ಸಲ್ಲಿಸಿದಾಗ್ಯೂ ಸ್ಥಳಾಂತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸದರಿ ವಿದ್ಯುಚ್ಛಕ್ತಿ ಕಂಬವನ್ನು ಸ್ಥಳಾಂತರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ಸಚಿವರು).—

ಅ) ಮನೆ ಮಾಲೀಕರು ಮನವಿ ಸಲ್ಲಿಸಿ, ಆ ಕೆಲಸಕ್ಕೆ ತಗಲುವ ಅಂದಾಜಿನ ಹಣ ಮಂಡಳಿಗೆ ತುಂಬಿದರೆ ಸ್ಥಳಾಂತರಿಸುವುದಾಗಿ ಹೇಳಲಾಗಿತ್ತು.

ಆ) ಸಣ್ಣಸಿದ್ದಪ್ಪ ಚನ್ನಬಸಪ್ಪನವರ ಮನೆ ಮೇಲೆ ಹೋಗುತ್ತಿದ್ದ ೪೦೦ ವೋಲ್ಟ್ ಲೈನನ್ನು ಕಳೆದ ತಿಂಗಳಿನಲ್ಲಿ (ಫೆಬ್ರುವರಿ ೮೯) ಸ್ಥಳಾಂತರಿಸಲಾಯಿತು.

ಇ) ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲಾಗಿದೆ.

ಈ) 'ಆ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಮಂತ್ರಿಗಳು ಈ ಉತ್ತರವನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ನಿನ್ನೆಯ ದಿವಸ ನಡೆದ ಸ್ಥಳಪರಿಶೀಲನೆಯ ಪ್ರಕಾರ ಪೋಲನ್ನು ಷಿಫ್ಟ್ ಮಾಡಿಲ್ಲ. ಕಳೆದಸಾರಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಮೇಲೆ ತಾ; ೨೩–೭–೮೮ರಂದು ಚನ್ನಬಸಪ್ಪನವರು ೧೮೦೦–೦೦ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಮಂಡಲಿಗೆ ಕಟ್ಟಿದ್ದಾರೆ. ಆದರೂ ಕೂಡ ಈ ವಿದ್ಯುಚ್ಛಕ್ತಿ ಕಂಬವನ್ನು ಅಲ್ಲಿಂದ ಷಿಫ್ಟ್ ಮಾಡಿಲ್ಲ. ಆದರೆ ಇಲಾಖೆಯವರು ಷಿಫ್ಟ್ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಈ ರೀತಿಯ ಉತ್ತರವನ್ನು ಅಧಿಕಾರಿಗಳು ಬರೆದುಕೊಟ್ಟ ಮಂತ್ರಿಗಳ ಬಾಯಲ್ಲಿ ಆವನ್ನು ಹೇಳಿಸಿ ಈ ಸದನವನ್ನು ಮತ್ತು ಜನರನ್ನೂ ಮಿಸ್‌ಲೀಡ್ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಮಾನ್ಯ ಮಂತ್ರಿಗಳು ವಾಸ್ತವಾಂಶ ಏನೆಂಬುದನ್ನು ಸರಿಯಾಗಿ ತಿಳಿದು ಉತ್ತರ ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಣವನ್ನು ಮುಂಚಿತವಾಗಿ ಕಟ್ಟಿರತಕ್ಕದ್ದು ನಿಜ. ಆದರೆ ಅಕ್ಕಪಕ್ಕದಲ್ಲಿರತಕ್ಕ ಜನರು ಈ ಕಂಬವನ್ನು ಷಿಫ್ಟ್ ಮಾಡುವುದರಿಂದ ನಮಗೆ ತೊಂದರೆಯಾಗುತ್ತದೆ. ಕೇವಲ ಅವರೊಬ್ಬರ ಮನೆಗೆ ಅನುಕೂಲವಾಗುವಂತೆ ಮಾಡಿದರೆ ಸರಿಯಾಗುವುದಿಲ್ಲ. ನಮ್ಮ ಮನೆಗಳ ಮೇಲೆ ಹಾರುಹೋಗುವ ಲೈನುಗಳನ್ನು ಕೂಡ ತಪ್ಪಿಸಬೇಕೆಂದು ಹೇಳುತ್ತಿದ್ದಾರೆ. ಈಗ ಅಲ್ಲಿ ಒಂದು ಕಂಬವನ್ನು ಹಾಕಿ ಅದರಮೇಲೆ ಲೈನನ್ನು ತೆಗೆದುಕೊಂಡು ಇವರ ಮನೆಯ ಮೇಲೆ ಹೋಗುತಕ ಲೈನನ್ನು ತಪ್ಪಿಸಿದ್ದೇವೆ. ಈಗ್ಗೆ ೩–೪ ದಿ[illegible] ಹಿಂದೆ ಆ ಕಂಬವನ್ನು ಷಿಫ್ಟ್ ಮಾಡಿಸಿದ್ದೇವೆ.

ಶ್ರೀ ಬಿ. ಗುರುಪ್ರಸಾದ್.—ಸ್ವಾಮಿ, ನಾನು ಏತಕ್ಕೆ ಸುಳ್ಳು ಹೇಳಲಿ. ಇರತಕ್ಕ ಪಾಸ್ಪವಾಂಶವನ್ನು ಮಾನ್ಯ ಮಂತ್ರಿಗಳು ಏತಕ್ಕೆ ಹೇಳುತ್ತಿಲ್ಲವೋ ಗೊತ್ತಿಲ್ಲ. ಅಲ್ಲಿ ಕಂಬವನ್ನು ಷಿಫ್ಟ್ ಮಾಡಿಲ್ಲ. ಒಂದುವೇಳೆ ಆ ಕಂಬವನ್ನು ಷಿಫ್ಟ್ ಮಾಡುವುದಕ್ಕೆ ಏನಾದರೂ ಟೆಕ್ನಿಕಲ್ ಕಾಂಪ್ಲಿಕೇಷನ್ಸ್ ಇದ್ದರೆ ಇಂಥ ಕಾರಣದಿಂದ ಅದನ್ನು ಷಿಫ್ಟ್ ಮಾಡುವುದಕ್ಕಾಗುವುದಿಲ್ಲವೆಂದು ಮಂತ್ರಿಗಳು ಹೇಳಲಿ. ಅದಕ್ಕೆ ಬೇಕಾದರೆ ಯಾವ ರೀತಿ ಮಾಡಬೇಕೆಂದು ನಾವು ಸಲಹೆ ಮಾಡುತ್ತೇವೆ. ಇಲಾಖೆಯವರು ಪಾರ್ಟಿಯಿಂದ ದುಡ್ಡನ್ನು ಕಟ್ಟಿಸಿಕೊಂಡೂ ಆ ಕೆಲಸವನ್ನು ಮಾಡಿಲ್ಲವೆಂದರೆ ನಾವು ಏನು ಹೇಳಬೇಕು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕಂಬವನ್ನು ಷಿಫ್ಟ್ ಮಾಡಿಲ್ಲವೆಂದು ಮಾನ್ಯ ಸದಸ್ಯರು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಇದೇನೂ ಪಾಲಸಿ ಮ್ಯಾಟರ್ ಅಲ್ಲ. ಇದೊಂದು ಸಣ್ಣ ಕೆಲಸ. ಅವರು ಹಣವನ್ನು ಕಟ್ಟಿದ್ದಾರೆ. ಹಣವನ್ನು ಕಟ್ಟಿಸಿಕೊಂಡಮೇಲೆ ಆ ಕೆಲಸವನ್ನು ಮಾಡಿಕೊಡಬೇಕಾದ್ದು ಇಲಾಖೆಯ ಕರ್ತವ್ಯ. ಈ ಕೆಲಸವನ್ನು ಮಾಡಿಕೊಟ್ಟಿದ್ದೇವೆ. ಆದರೆ ಕೆಲಸ ತಡವಾಗಿ ಆದುದಕ್ಕೆ ಕಾರಣ ಇಲಾಖೆಯ ಉದಾಸೀನ ಭಾವನೆ ಅಲ್ಲ. ಅಕ್ಕಪಕ್ಕದ ಮನೆಯವರಿಗೆ ತೊಂದರೆಯಾಗದಂತೆ ಮಾಡಬೇಕಾಯಿತು. ಈಗ ಅವರ ಮನೆಯಮೇಲೆ ಹಾದು ಹೋಗತಕ್ಕ ೪೦೦ ವೋಲ್ಟೇಜ್‌ನ ಇನ್ನೊಂದು ಕಂಬವನ್ನು ಹಾಕುವುದರ ಮೂಲಕ ಆ ಲೈನನ್ನು ಷಿಫ್ಟ್ ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಕೃಷ್ಣನ್‌ರವರೇ ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಚುಕ್ಕಿ ಪ್ರಶ್ನೆ ೧೪೮ (೨೯೩) (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

Liaison Offices and Guest Houses of Public Undertakings

150 (633) Sri J. A. Fernandes.—Will the Minister for Commerce and Industries, National savings Scheme pleased to state:—

1) The total number of State Government (Public Sector) undertaking having (a) Liaison Offices (b) Guest Houses in Bangalore?

2) The total expenditure incurred on the maintainance of these liaison offices and Guest Houses for the last three years?

Sri Veeranna (Minister for Commerce and Industries National Savings Scheme).—

1) Two State Government Public Sector Undertakings have Liaison/branch offices and seven have Guest Houses.

2) The total expenditure for the last 3 years on the maintenance of the liaison/branch offices and Guest Houses is Rs. 28.51 lakhs.

9.30 A. M.

SRI J.A. FERNANDES.—Sir, the answer given is not clear, because there are 4 more public undertakings having liaison officers. These are M.P.M., Hutti Gold Mines Ltd., Mysore Sugar Ltd. and Vikrant Tyres Ltd. The information given by the hon. Minister is not correct, Is there any justification to have liaison officers as well guest houses of State Government undertakings in Bangalore ?